**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರ ನಿಯಮ-72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ.**

**ವಿಷಯ**

ಕೋಲಾರ ನಗರದಲ್ಲಿರುವ ದೇವರಾಜ್ ಅರಸ್ ಎಜುಕೇಷನ್ ಟ್ರಸ್ಟ್‌ನಿಂದ ನಡೆಯುತ್ತಿರುವ ಆರ್. ಎಲ್. ಜಾಲಪ್ಪ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯು ಕೋಲಾರ ನಗರಸಭೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಮುಂದುವರೆದಂತೆ, ಈ ಸಂಸ್ಥೆ ಕಳೆದ 2002-03 ರಿಂದ 2023-24ನೇ ಸಾಲಿನವರೆಗೆ ಆಸ್ತಿ ತೆರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ಪಾವತಿಸಿರುವುದಿಲ್ಲ. ನಗರಸಭೆ ಕಾರ್ಯಾಲಯವು ಸಾಕಷ್ಟು ನೋಟೀಸ್ ನೀಡಿದ್ದರೂ ಸಹ ಈ ಸಂಸ್ಥೆ ಪ್ರಸ್ತುತ ಕೋಟ್ಯಾಂತರ ರೂಪಾಯಿಗಳನ್ನು ಬಾಕಿ ಉಳಿಸಿಕೊಂಡಿದ್ದು, ಇದುವರೆಗೂ ಪಾವತಿಸಿರುವುದಿಲ್ಲ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಂತೆ ಮಾಲೀಕರು ಸ್ವಯಂ ಘೋಷಿತವಾಗಿ ಆಸ್ತಿ ತೆರಿಗೆಯನ್ನು ಪಾವತಿಸಲು ನಿಯಮಗಳನ್ನು ರೂಪಿಸಲಾಗಿದೆ. ಈ ನಿಯಮದಂತೆ ಸಂಸ್ಥೆಯಿಂದ ಬಾಕಿ ಹಣ ಪಾವತಿ ಮಾಡಬೇಕಾಗಿರುತ್ತದೆ. ಇದಲ್ಲದೇ ಸಂಸ್ಥೆಯ ಒಳಗಡೆ ಹಲವಾರು ಹೊಸ ಕಟ್ಟಡಗಳ ಕಾಮಗಾರಿಗಳು ನಡೆಯುತ್ತಿದೆ. ಆದರೆ ಇವುಗಳಿಗೆ ನಿಯಮದಂತೆ ನಗರಸಭೆಯಿಂದ ನಕ್ಷೆಯ ಅನುಮೋದನೆ ಪಡೆಯಬೇಕಾಗಿರುತ್ತದೆ. ಆದರೆ ಈ ಸಂಸ್ಥೆ ನಕ್ಷೆಯ ಅನುಮೋದನೆ ಪಡೆಯದೇ, ದೌರ್ಜನ್ಯದಿಂದ ಕಟ್ಟಡ ಕಾಮಗಾರಿ ನಡೆಸುತ್ತಿದ್ದಾರೆ. ಇದರಿಂದ ನಗರಸಭೆಗೆ ಬರಬೇಕಾಗಿರುವ ಹಣ ಹಾಗೂ ಕಟ್ಟಡ ಕಾರ್ಮಿಕರ ನಿಧಿಗೆ ಶೇ.1ರಷ್ಟು ಬರಬೇಕಾಗಿರುವ ಹಣವನ್ನು ಕಟ್ಟದೇ, ನಗರಸಭೆಯನ್ನು ವಂಚಿಸುತ್ತಿದ್ದಾರೆ. ಇದಲ್ಲದೇ ನಗರಸಭೆಯ ಅಧಿಕಾರಿಗಳು ಬಾಕಿ ವಸೂಲಿಗೆ ಹೋದಂತ ಸಮಯದಲ್ಲಿ ದರ್ಪ ತೋರಿಸುತ್ತಿದ್ದಾರೆ. ಕೋಲಾರ ನಗರಸಭೆ ಈಗಾಗಲೇ ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ಕೋಲಾರ ನಗರಸಭೆಗೆ ಪಾವತಿ ಮಾಡಬೇಕಾಗಿರುವ ಬಾಕಿ ಹಣವನ್ನು ವಸೂಲಿ ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವ ಅನಿವಾರ್ಯತೆ ಇರುವುದರಿಂದ, ಈ ವಿಷಯವನ್ನು ಮಾನ್ಯ ಪೌರಾಡಳಿತ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ**

ಕೋಲಾರ ನಗರಸಭೆ ವ್ಯಾಪ್ತಿಯಲ್ಲಿಯ ವಾರ್ಡ್ ನಂ.1 ರ ಟಮಕ ಪ್ರದೇಶದ ಶ್ರೀ ದೇವರಾಜ ಅರಸು ಎಜುಕೇಷನಲ್ ಟ್ರಸ್ಟ ಕೋಲಾರ ಸಂಸ್ಥೆಗೆ ಕೋಲಾರ ನಗರಸಭೆಯಿಂದ 2002-03ನೇ ಸಾಲಿನಿಂದ 2020-21ನೇ ಸಾಲಿನವರೆಗೆ ಆಸ್ತಿ ತೆರಿಗೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ದಿನಾಂಕ:-19-10-2020 ರಂತೆ ನೋಟೀಸ್ ನೀಡಲಾಗಿರುತ್ತದೆ. ಆದರೆ, ಸದರಿಯವರು ದೇವರಾಜು ಅರಸು ಸಂಸ್ಥೆ ಧರ್ಮಾರ್ಥ ಮತ್ತು ಶೈಕ್ಷಣಿಕ ಸಂಸ್ಥೆ ಆಗಿರುವುದರಿಂದ ಶಿಕ್ಷಣದ ಉದ್ದೇಶದ ಕಟ್ಟಡಗಳಿಗೆ ತೆರಿಗೆ ವಿನಾಯತಿ ನೀಡಬೇಕಾಗಿರುತ್ತದೆ. ಅಲ್ಲದೇ, ನಗರಸಭೆಯಿಂದ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳನ್ನು ನೀಡದೇ ಇರುವುದರಿಂದ ಸೇವಾ ಶುಲ್ಕವನ್ನು ಸಹ ಪಾವತಿ ಮಾಡುವಂತಿಲ್ಲ ಎಂಬುದಾಗಿ ಮನವಿ ಸಲ್ಲಿಸಿ ತೆರಿಗೆ ವಿನಾಯತಿಯನ್ನು ಕೋರಿರುತ್ತಾರೆ. ಈ ಬಗ್ಗೆ ಕೋಲಾರ ನಗರಸಭೆಯಿಂದ ದಿನಾಂಕ:-28-05-2020 ರಂದು ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆ ರವರಿಗೆ ನಿರ್ದೇಶನ ನೀಡುವಂತೆ ಸ್ಪಷ್ಟೀಕರಣ ಕೋರಲಾಗಿರುತ್ತದೆ. ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆಯವರ ಪತ್ರ ದಿನಾಂಕ:12-06-2020 ರಲ್ಲಿ ಸದರಿ ಸಂಸ್ಥೆಯ ಕಟ್ಟಡಗಳನ್ನು ಪರಿಶೀಲಿಸಿ, ತೆರಿಗೆ ಪಾವತಿಸಿಕೊಳ್ಳುವಂತೆ ನಿರ್ದೇಶನ ನೀಡಿರುತ್ತಾರೆ. ಈ ಬಗ್ಗೆ ಸ್ಥಳ ಪರಿಶೀಲನೆ ಹಾಗೂ ಆಸ್ತಿ ತೆರಿಗೆ ಪಾವತಿಸಿರುವ ಬಗ್ಗೆ ಪರಿಶೀಲನೆ ನಡೆಸಲಾಗಿ ಸ್ವಯಂ

...2/

ಘೋಷಿತ ಆಸ್ತಿ ತೆರಿಗೆಯನ್ನು ವಾಸ್ತವಿಕ ತೆರಿಗೆಗಿಂತ ಕಡಿಮೆ ತೆರಿಗೆ ಪಾವತಿಸಿರುವುದರಿಂದ ಕೋಲಾರ ನಗರಸಭೆಗೆ 2002-03 ರಿಂದ 2020-21ನೇ ಸಾಲಿನವರೆಗೆ ಪಾವತಿಸಬೇಕಾದ ವ್ಯತ್ಯಾಸದ ಮೊತ್ತ ಹಾಗೂ 2020-21 ನೇ ಸಾಲಿನ ಆಸ್ತಿ ತೆರಿಗೆ ಒಟ್ಟು ಮೊತ್ತ ರೂ.12,62,91,800/- ಗಳನ್ನು ಪಾವತಿಸುವಂತೆ ನೋಟೀಸ್ ನೀಡಲಾಗಿತ್ತು.

ಜಿಲ್ಲಾಧಿಕಾರಿಗಳು ಕೋಲಾರ ಜಿಲ್ಲೆ ಇವರ ನಿರ್ದೇಶನದಂತೆ ದೇವರಾಜು ಅರಸು ಸಂಸ್ಥೆಯ ತಾಂತ್ರಿಕ ಸಿಬ್ಬಂದಿ ಹಾಗೂ ನಗರಸಭೆ ಅಧಿಕಾರಿ ವರ್ಗದವರೊಂದಿಗೆ ಪುನ: ಕಟ್ಟಡಗಳ ಹಾಗೂ ಆಸ್ತಿ ತೆರಿಗೆಯ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ಸಂಸ್ಥೆಯ ಒಟ್ಟು 41 ಕಟ್ಟಡಗಳಿಗೆ 2002-03ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಸಂಸ್ಥೆಯ ಒಟ್ಟು ಆಸ್ತಿ ತೆರಿಗೆ ರೂ.14,99,85,360/- ಗಳ ಮೊತ್ತವಾಗಿದ್ದು, ಸದರಿಯವರು ನಗರಸಭೆಗೆ ಒಟ್ಟು ಮೊತ್ತ ರೂ.04,03,04,245/- ಗಳನ್ನು ಕೋಲಾರ ನಗರಸಭೆಗೆ ಪಾವತಿಸಿರುತ್ತಾರೆ. ಸಂಸ್ಥೆಯು ರೂ.10,99,85,360/- ಗಳ ಮೊತ್ತವನ್ನು ಪಾವತಿಸಲು ಬಾಕಿ ಇದ್ದು, ಜಿಲ್ಲಾಧಿಕಾರಿಗಳು ಹಾಗೂ ಸಂಸ್ಥೆಯ ಆಡಳಿತ ಮಂಡಳಿಯವರೊಂದಿಗೆ ಚರ್ಚಿಸಲಾಗಿರುತ್ತದೆ. ಶ್ರೀ ದೇವರಾಜು ಅರಸು ಎಜುಕೇಷನಲ್ ಟ್ರಸ್ಟ್, ಟಮಕ ಕೋಲಾರರವರು ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಮಾನ್ಯ ಉಚ್ಛ ನ್ಯಾಯಾಲಯ ಬೆಂಗಳೂರು ಇಲ್ಲಿ W.P.No.4555/2020 ರಂತೆ ಪ್ರಕರಣವನ್ನು ದಾಖಲಿಸಿದ್ದು, ದಾವೆಯು ವಿಚಾರಣೆ ಹಂತದಲ್ಲಿರುತ್ತದೆ.

ಶ್ರೀ ದೇವರಾಜು ಅರಸು ಎಜುಕೇಷನಲ್ ಟ್ರಸ್ಟ್, ಟಮಕ ಕೋಲಾರ ಸಂಶೋಧನಾ ಕೇಂದ್ರದಲ್ಲಿ 2019-20 ಮತ್ತು 2020-21ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ಆಯ್ಕೆ ಮಾಡಲಾದ ಆಸ್ಪತೆಗಳಲ್ಲಿ ಇದು ಒಂದಾಗಿರುತ್ತದೆ. ಆ ಸಂಧರ್ಭದಲ್ಲಿ ರೋಗಿಗಳ ಚಿಕಿತ್ಸೆಗೆ ಹಾಸಿಗೆಗಳ ಕೊರತೆಯಿಂದ ಅನಧಿಕೃತವಾಗಿ ಕಟ್ಟಡ ಕಟ್ಟುತ್ತಿರುವುದು ಕಂಡುಬಂದಿದ್ದರಿಂದ ನಗರಸಭೆಯಿಂದ ನೋಟೀಸ್ ನೀಡಲಾಗಿರುತ್ತದೆ. ಆದರೂ ಸಹ, ಲಾಕ್‌ಡೌನ್ ಸಮಯದಲ್ಲಿ ಹಾಗೂ ನಂತರದ ದಿನಗಳಲ್ಲಿ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಿಸಿರುವುದು ಕಂಡು ಬಂದಿರುತ್ತದೆ. ಸದರಿಯವರು ನಗರಸಭೆಯಿಂದ ಯಾವುದೇ ಕಟ್ಟಡ ಪರವಾನಿಗೆ ಪಡೆಯದೇ ಇರುವುದರಿಂದ ಸರ್ಕಾರಕ್ಕೆ ಪಾವತಿಸಬೇಕಾದ ಶೇ.1 ರಷ್ಟು ಕಾರ್ಮಿಕ ನಿಧಿಗೆ ಪಾವತಿಸಲು ಸಾಧ್ಯವಾಗಿರುವುದಿಲ್ಲ.

ಅನಧಿಕೃತ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ಪ್ರಕಾರ ನಿಯಮಾನುಸಾರ ಆಸ್ತಿ ತೆರಿಗೆ ಪಾವತಿಯ ಸಂಬಂಧವಾಗಿ ಕ್ರಮವಹಿಸಲಾಗುತ್ತದೆ. ಹಾಗೂ ಸದರಿ W.P.No.4555/2020 ರ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥವಾದ ನಂತರ ಆಸ್ತಿತೆರಿಗೆ ವಸೂಲಾತಿಗೆ ಕ್ರಮವಹಿಸಲಾಗುತ್ತದೆ.

ಸಂಖ್ಯೆ: ನಅಇ 21 ಜಿಇಎಲ್ 2024 (ಇ)

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು